5. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದಲ್ಲಿ ಜಪ್ತಿ ಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜ್ ಮೊಬಲಗ್ಯೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕ ದ್ದಾಗಿರುತ್ತದೆ. ಕಮ್ಮಿ ಬಂದ ಹಣವನ್ನು ಕೇಳಿದಕೂಡಲೆ ಕೊಡದೆ ಇದ್ದರೆ ಅದು ರವಿನ್ಯೂ ಡಿಮ್ಯಾಂಡಿನಂತೆ ವಸೂಲ್ಮಾ ಕೊಳ್ಳಲ್ಪಡುತ್ತೆ.

6. ಇಜಾರೆದಾರನು ಈ ಕೆಳಗೆ ನಮೂದಿಸಿರುವ ಷರತ್ತುಗಳಮೇಲೆ ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಒಂದು ಮು ಚ್ಚಳಿಕೆ ಬರದುಕೊಡತಕ್ಕದ್ದು. ಮತ್ತು ಮುಚ್ಚಳಿಕೆಯು ಇಜಾರೆ ಮುಂದಾದ ಸಂಗತಿ ಇಜಾರೆದಾರನಿಗೆ ಖಿನವ ತಾರೀಖು ಲಾಗಾಯತು ಮೂರು ದಿವಸಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತೆ. ಇದಕ್ಕೆ ತಪ್ಪಿದರೆ ಡಿಪಾಜಿಟ್ ಹಣವನ್ನ ಸರಕಾ ರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ದುಸರಾ ಹರಾಜು ಮಾಡಲ್ಪಡುವದು.

7. ಬಾಕಿ ಆಗುವ ಮೊಬಲಗು ಮತ್ತು ಪೂರಾ ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಫಂಡ್ ಸಹ ಪೂರ್ತಿಯಾಗಿ 1907ನೆ ಜುಲೈ ಆಖೈರು ಒಳಗಾಗಿ ಪಾವತಿ ಮಾಡಲ್ಪಡಜೇಕು. ಆಥವಾ ಆರ್ಡ್ವಾನ್ಸ್ ಕ್ವಾರ್ಟರ್ಲಿ ಖಿಸ್ತ್ ಮೇರೆ ಅಂದರೆ, 1907ನೆ ಅಕ್ಟೋಬರ್ 1ನೆ ತಾರೀಖಿನಲ್ಲಿ ಬಂದನೆ ಖಿಸ್ತು 190 ನೆ ಇಸವಿ ಜನವರಿ 1ನೆ ತಾರೀಖಿನಲ್ಲಿ ಎರಡನೆ ಖಿಸ್ತು ಮತ್ತು 190ನೆ ಇಸವಿ ಮೇ 1ನೆ ತಾರೀಖಿನಲ್ಲಿ ಮೂರನೆ ಖಿಸ್ತು ಪಾವತಿ ಮಾಡಜೇಕು. ಈ ಮೇರೆ ನಮೂದಿಸಿರುವ ಖಿಸ್ತಿನ ಹಣ ಪಾವತಿ ಮಾಡಲ್ಪಡದೆ ಇದ್ದರೆ ಜಕ್ಕೆಯ ಜವಾಬ್ದಾರಿ ಮತ್ತು ರಫ್ತು ಕೆಲಸ ನಿಲ್ಲಿಸಲ್ಪಡುವಲ್ಲದೆ ಇಜಾರೆಯ ಬಾಕಿ ಆಗುವ ವಿಶಿಷ್ಟ ಮೊಬಲಗು ಮತ್ತು ಲೋಕಲ್ ಫಂಡ್ ಸಹಾ ರವಿನ್ಯೂ ಬಾಕಿಯಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

ಷರತ್ತುಗಳು.

1. ಒಂದು ವರುಷಕ್ಕೆ ಒಳಪಟ್ಟ ಎಳೇ ಗಿಡಯಾ ಕೊಂಬೆಯನ್ನು ಕಾಯಕೂಡದು. ಆಥವಾ ಅದರ ಬಾಗಟೆಯನ್ನು ತೆಗಿಯಕೂಡದು.

2. ಇಜಾರೆದಾರನೇ ಆಗಲಿ ಇಜಾರೆದಾರನ ನೌಕರರೇ ಆಗಲಿ ಆಥವಾ ಷಿಕಮ್ಮಿ ಕಂಟ್ರಾಕ್ಟ್‌ದಾರನೆ ಆಗಲಿ ಈ ಗಿಡಗಳನ್ನು ಕಡಿಯದಂತೆ ಆಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.

3. ಕೆಲಸ ನಡಿಸಲು ವಿಂಗಡಿಸಲ್ಪಟ್ಟು ಇರುವ ಸರಕ್ಲ್‌ಗಳಲ್ಲಿ ಜಕ್ಕೆ ಜಮಾಯಿಸುವದಕ್ಕೆ ನೇಮಿಸಲ್ಪಟ್ಟ ಸ್ಟಾಫ್‌ಗಳ ಮತ್ತು ಷಿಕಮ್ಮಿ ಕಂಟ್ರಾಕ್ಟರುಗಳ ಹೆಸರಿನ ಒಂದು ಪಟ್ಟಿಯನ್ನು ಕೊಡತಕ್ಕದ್ದು.

4. ತೊಗಟೆ ತೆಗಿಯಲ್ಪಟ್ಟ ಸವದೆ ಇಜಾರೆದಾರನಿಗೆ ಸೇರಿದ್ದಾಗಿದೆ.

5. ಇಜ್ಜಾರೆಗೆ ಸಂಬಂಧಪಟ್ಟ ಜಕ್ಕೆ ಯಾ ಜಮಾವಣಿ ಮೊತ್ತ ತೋರಿಸುವ ತಪಶೀಲು ಲಿಖಿತವನ್ನು ಇಜಾರೆದಾರನು ಇಡಬೇಕು ಮತ್ತು ಅಂಥಾ ಲೆಖ್ಖವನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರೇ ಆಗಲಿ, ಫಾರೆಸ್ಟ್ ರೇಂಜ್ ಆಫಿಸರೇ ಆಗಲಿ ಅವುಲ್ದಾರ್ರೇ ಆಗಲಿ ಆಥವಾ ಅವರುಗಳಿಂದ ನೇಮಿಸಲ್ಪಡುವ ಇತರ ಆಫಿಸರವರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.

6. ನಾಗಿಸಿಕೊಂಡುಹೋಗುವ ಪ್ರತಿ ಒಂದು ಗಾಡಿ ಬೋಜಾ ಜಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮೆಸರ್ಮಾಡುವ ರೀತಿಯಲ್ಲಿ ಪ್ಯಾಸ್ ಪಡಿಯತಕ್ಕದ್ದು.

7. ದಾಸ್ತ್ ಇಡಲ್ಪಟ್ಟ ಮತ್ತು ಜಮಾಯಿಸಲ್ಪಟ್ಟ ವಿಶಿಷ್ಟ ಜಕ್ಕೆಯನ್ನು 1908ನೆ ಇಸವಿ ಜೂನ್ ಆಖೈರಿಗಾಗಿ ಮೈಸೂರು ಡಿಸ್ಟ್ರಿಕ್ಟಿನ ಸರಹದ್ದು ಹೊರಕ್ಕೆ ತೆಗದುಕೊಂಡು ಹೋಗತಕ್ಕದ್ದು.

ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪು ನಡವಲ್ಲಿ ಇಜಾರೆಯ ಹಕ್ಕನ್ನು ಮಾಡಲ್ಪಡುವದಲ್ಲದೆ ಅದುವರೆಗೆ ಜಮಾಯಿಸೋಣವಾಗಿದ್ದ ಜಕ್ಕೆ ವಿಸಿಷ್ಟವು ಸರ್ಕಾರಕ್ಕೆ ದಂಡವಾಗಿ ಕೊಳ್ಳಲ್ಪಡತಕ್ಕದ್ದು. ಮತ್ತು ಡಿಪ್ಯೂಟಿ ಕನ್ವಿಕ್ಷನರವರಿಂದ ಹುಕುಂ ಆದಹಾಗೆ ಅವನಿಂದ ಪಾವತಿಯಾಗ ಪೂರಾ ಮೊಬಲಗಾಗಲಿ ಆಥವಾ ಅದರ ಒಂದು ಭಾಗವಾಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತ

ಎಂ. ಜಿ. ರಾಮಚಾರ್
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಸ್ಟೇಷನ್.

ಇಸ್ತಿಹಾರ್.

ಕಾರೀಖು 30ನೆ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಎಲ್ಲಾ ತಾಲ್ಲೂಕುಗಳ ಸ್ಟೇಟ್ ಫಾರೆಸ್ಟ್ ಜಂಗಲ್‌ಗಳು ಮತ್ತು ಎಲ್ಲಾ ಸರ್ಕಾರಿ ಬಂಜರು ಜಮೀನ್‌ಗಳಲ್ಲಿ ದೊರೆಯುವ ಫಾರೆಸ್ಟ್ ಪಸಾರೆ ಜಿನಿಸುಗಳನ್ನು 1907ನೆ ಸಾಲಿಗೆ ಜಮಾಯಿಸಿ ತಗದುಕೊಂಡು ಹೋಗುವ ಹಕ್ಕನ್ನು ಪಂಜಾರಾಶಿಗೆ ಒಳಪಟ್ಟು ಬಹಿರಂಗವಾಗಿ ತಾಲ್ಲೂಕಾರಾಗಿ

ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಅಥವಾ ರೇಂಜಾಫಿಸರವರು ಮತ್ತು ಆಯಾಯ ತಾಲ್ಲೂಕು ಅಮಲ್ದಾರ್ರವರೊಂದಿಗೆ ಈ ಕೆಳಗೆ ವಿವರಿಸಿ ಇರುವ ಮೇರೆ ಆಯಾಯ ತಾಲ್ಲೂಕು ಹೆಡ್ ಕ್ವಾರ್ಟರ್ಸಿನಲ್ಲಿ ಹರಾಜು ಮಾಡಿಸಲಾಗುತ್ತೆ :—

ನಂಬರು.	ತಾಲ್ಲೂಕು.	ಹರಾಜು ತಾರೀಖು.
1	ಮಂಜರಾಬಾದ್	23—7—07
2	ಬೇಲೂರು	25—7—07
3	ಅರಕೇಕರೆ	27—7—07
4	ಚನ್ನರಾಯಪಟ್ಟಣ	29—7—07
5	ಹೊಳೇನರಸೀಪುರ	31—7—07
6	ಅರಕಲಗೂಡ ..	2—8—07
7	ಹಾಸನ ಆಲೂರು ಸಬ್ ತಾಲ್ಲೂಕು ಕೇರಿ ..	5—8—07

2. ಛಡ ದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆಯೇ ಹರಾಜು ಮೊಬಲಗಿನ ಕಾಲು ಹಿಸ್ಸೆ ಮೊಬಲಗನ್ನು ಠೇವಣಿ ಯಾಗಿ ಹಾಜರ್ಮಾಡಬೇಕು. ಆಲ್ಲದೇ ಬಾಕಿ ಉಳಿಯುವ ಮೊಬಲಗನ್ನು ಹರಾಜು ತಾರೀಖು ಲಾಗಾಯತು 15 ದಿವಸದಲ್ಲಿ ಕೊಡ ಬೇಕು. ಹಾಗೆ ಕೊಡಲು ತಪ್ಪಿದಲ್ಲಿ ಬಾಬು ಪುನಃ ಹರಾಜು ಮಾಡಲ್ಪಡುವದು. ಮೇಲ್ಕಂಡಂತೆ ನಡಿಸುವ ದುಸರಾ ಹರಾಜಿನಲ್ಲಿ ಗುಂಟಾಗುವ ನಷ್ಟಕ್ಕೆ ಅವಲ್ ಛಡ ದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರೇ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಛಡ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ.

3. ಹರಾಜು ಮೊಬಲಗಿಗೆ ರೂಪಾಯಿಗೆ ಬಂದಾಣಿ ಪುಂತೆ ಲೋಕಲ್ ಸೆಸ್ ಸಹಾ ವಿಧಾಯುಕ್ತವಾದ ಕಾಲದಲ್ಲಿ ಕೊಡಬೇಕು.

4. ಬಾಕಿ ಮುಕ್ತಾಲು ಹಿಸ್ಸೆ ಮೊಬಲಗನ್ನು ಕೊಡುವದರಲ್ಲಿ ತಪ್ಪಿದಾಗ್ಯೂ ಅಥವಾ ಸಾವಕಾಶವಾದಾಗ್ಯೂ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಠೇರಿಸಿಕೊಳ್ಳುವದರಲ್ಲಿ ಬರುತ್ತಿಯಲ್ಲದೆ ಮೇಲ್ಕಂಡ 2ನೇ ಪ್ಯಾರಾ 3, 4, 5, 6ನೇ ಪಕ್ತಿಗಳಲ್ಲಿ ಕಂಡಂತೆ ಕ್ರಮ ಜರಿಗಿಸಲ್ಪಡುವದು.

5. ಕ್ರಂಟ್ರಾಕ್ಟುದಾರನು ಇನ್ನಾಂದಾರ್ಗಳಿಗೆ ಇರುವ ಯಾವದೊಂದು ಹಕ್ಕಿಗೂ ಕುಂದೆಕ ಉಂಟುಮಾಡಕೂಡದು.

6 (a) 1ನೆ ಪ್ಯಾರಾದಲ್ಲಿ ಕಂಡ ಜಾಗ್ರೆಯು ಜಂಗಲ್‌ವಾರ್ ಅಥವಾ ಹೋಬಳಿವಾರ್ ಗುತ್ತಿಗೆ ಕೊಡುವದಕ್ಕೆ ಸಾಕಾದ ದೊಡ್ಡ ಮುಖ್ಯ ಕಾರಣವಿದ್ದ ಹೆಚ್ಚು ದರಖಾಸ್ತುದಾರರು ಅಪೇಕ್ಷಿಸಿದ ವಿನಹ ತಾಲ್ಲೂಕ ವಾರಾಗಿಯೇ ಗುತ್ತಿಗೆ ಕೊಡಲಾಗುತ್ತೆ. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ ಅಪ್ಪಣೆ ವಿನಹ ಪೆಟ್ಟಿಕಮಿ ಇಜಾರೆ ಮಾಡಕೂಡದು.

(b) ಜವಾಬಣೇ ಕೆಲಸದಲ್ಲಿ ವಿಜಂಬರು ಅಥವಾ ನೌಕರರು ನಡೆಸುವ ಕೃತ್ಯಗಳಿಗೆ ಇಜಾರೆದಾರ್ರಾಗಲಿ ಅಥವಾ ಸಬ್ ಇಜಾರೆದಾರ್ರಾಗಲಿ ಖುದ್ದಾ ಜವಾಬ್ದಾರರಾಗಿರುತ್ತಾರೆ.

7. ಹರಾಜು ರೂಲ್ಸು ಮೇರೆ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದಲಾಗಲಿ ಡೆಪ್ಯೂಟಿ ಕಮಿಷನರ್ ಸಾಹೇಬರವರಿಂದಲಾಗಲಿ ಅಥವಾ ಕಲೆಕ್ಟರ್ ಸಾಹೇಬರಿಂದಲಾಗಲಿ ವಿಚಾರಿಸಲ್ಪಡುತ್ತೆ.

ಹರಾಜು ಆಗುವ ಪದಾರ ಜೆನಸಿಗಳ ಹರಾಜು ಪಟ್ಟಿ ಲಗತ್ತಿದೆ.

ಸಂಖ್ಯೆ.	ಜೆನಸು ಹೆಸರು.	ಸಂಖ್ಯೆ.	ಜೆನಸು ಹೆಸರು.
1	ಜೇಸುವೇಣಿ	15	ಬೇಲದ ಹಣ್ಣು
2	ಸೀಗೇಕಾಯಿ	16	ನಾಟೆ ಹುಳಿ
3	ಗೇರುಬೀಜ	17	ದಾಲಚಿನ್ನಿ
4	ಗೋಂದು	18	ಬೆಂಡೇನಾರು
5	ಹೊಂಗೇಬೀಜ	19	ಕಾಡಹಿಪ್ಪೇಬೀಜ
6	ಕಾಡಜಗಚೆಬೀಜ	20	ಬೂರಗದಹತ್ತಿ
7	ಅಂಟುವಾಳದಕಾಯಿ	21	ತಾರೇಕಾಯಿ
8	ಕಕ್ಕೇಕಾಯಿ	22	ಕಪಿಲಾರಂಗು
9	ಹುಣಸೇಕಂಣು	23	ಬೆಂಡು
10	ಕಾಡುಪರಳು	24	ಬಳಾಚಿನ ಕಲ್ಲು
11	ನಸ್ಯಾಣಿ ಮೊಗ್ಗು	25	ರಾಮಪತ್ರೆ ರಾಮಗೋಟು
12	ಹಾಲುಮಡ್ಡಿ	26	ಪಪ್ಪಳೀಡಕ್ಕೆ
13	ಕೋಲಾರ್‌ಜೊಬ್ಬಡೆ	27	ಸೋಮೆಜಕ್ಕೆ
14	ಹುರುಗಲಬೀಜ		

ಬಿ. ಐ. ಶಾಮರಾವ್,
ಪಾರ್ ಡೆಪ್ಯೂಟಿ ಕಮಿಷನರ್, ಹಾಸನ ಡಿಸ್ಟ್ರಿಕ್ಟ